


ಕೇಳುತ್ತವೆ. ನೀವು ಅನುಮತಿಸಿದರೆ ಬ್ರೌಸರ್ ಅದನ್ನು ರಕ್ಷಿಸಿಕೊಂಡು ಸಂಬಂಧಿಸಿದ ಸೈಟ್‌ಗೆ ಲಾಗಿನ್ ಆಗುವಾಗ ಪಾಸ್‌ವರ್ಡ್ ಅದೇ ಹಾಕಿಕೊಳ್ಳುತ್ತದೆ.

ಇದು ಬಹಳ ಅಪಾಯದ ನಡೆ. ಸೈಬರ್‌ಗಳಲ್ಲಿ ಬಳಸುವ ಕಂಪ್ಯೂಟರ್‌ಗಳು ನಮ್ಮದಾಗಿರುವುದಿಲ್ಲ. ನಮ್ಮ ಕಂಪ್ಯೂಟರ್‌ಗಳನ್ನು ಕೂಡ ನಾವೇ ಸದಾ ಬಳಸುತ್ತೇವೆ ಎಂದೂ ಹೇಳಲಾಗುವುದಿಲ್ಲ. ಅದ್ದರಿಂದ ಈ ವಿಷಯದಲ್ಲಿ ಎಚ್ಚರ ವಹಿಸಬೇಕು. 'ಮುಂದಿನ ಲಾಗಿನ್‌ಗಳಿಗೆ ನೆನಪಿನಲ್ಲಿಡಬೇಕೆ?' ಎಂದು ಕಂಪ್ಯೂಟರ್ ಕೇಳಿದಾಗ 'ನೋ' ಎನ್ನುವುದು ಜಾಣತನ. ಬ್ರೌಸರ್‌ಗಳು ಪಾಸ್‌ವರ್ಡ್ ರಕ್ಷಿಸಿಕೊಂಡಾಗ ಬ್ರೌಸರ್ ನಿಷ್ಠೆಯ ಬಗೆಗೆ ಯಾವ ಖಾತ್ರಿಯೂ ಇರುವುದಿಲ್ಲ.

**ಅತ್ಯುತ್ತಮ ಪಾಸ್‌ವರ್ಡ್ ಹೇಗಿರಬೇಕು?**

ಇತ್ತೀಚಿನ ಸಂಶೋಧನೆಯೊಂದು ಬಹಿರಂಗಪಡಿಸಿರುವಂತೆ ಸಾಮಾನ್ಯವಾಗಿ ಹೆಚ್ಚಿನವರು ಒಂದೇ ತರಹದ ಪಾಸ್‌ವರ್ಡ್ ಬಳಸುತ್ತಿದ್ದಾರಂತೆ. **1234546, AMMA, password, abc, 123, facebook, welcome, love,** ಜನ್ಮದಿನಾಂಕ, **0000,** ಇಂತಹ ಪಾಸ್‌ವರ್ಡ್‌ಗಳನ್ನೇ ಜನರು ಹೆಚ್ಚಾಗಿ ಬಳಸುತ್ತಿದ್ದಾರಂತೆ. ಇವು ದುರ್ಬಲ ಪಾಸ್‌ವರ್ಡ್ ಹ್ಯಾಕ್ ಮಾಡಲು ಬುದ್ಧಿವಂತರೇ ಬೇಕಿಲ್ಲ. ನಿಮ್ಮ ಅಕ್ಕ ಪಕ್ಕದವರೂ ಕಬಳಿಸಬಹುದು.

ಅದ್ದರಿಂದ ಒಂದು ಪ್ರಬಲವಾದ, ಬಲಿಷ್ಠವಾದ ಪಾಸ್‌ವರ್ಡ್ ರಚಿಸಿಕೊಳ್ಳಿ. ಮತ್ತು ಎಲ್ಲದಕ್ಕೂ ಅದೇ ಪಾಸ್‌ವರ್ಡ್ ಬಳಕೆ ಸರಿಯಲ್ಲ. ಈ ಕೆಳಗಿನ ಹಂತಗಳನ್ನು ಅನುಸರಿಸಿ ಒಂದು ಬಲಿಷ್ಠ ಪಾಸ್‌ವರ್ಡ್ ರಚಿಸಿಕೊಳ್ಳಬಹುದು! ಒಮ್ಮೆ ಪ್ರಯತ್ನಿಸಿ. ಉದಾಹರಣೆಯೊಂದಿಗೆ ವಿವರಿಸಿರುವುದನ್ನು ಗಮನಿಸಿ:

ಪಾಸ್‌ವರ್ಡ್ ರಚನೆಗೆ ಮೊದಲು ಒಂದು ವಾಕ್ಯವನ್ನು ಪಾಸ್‌ವರ್ಡ್‌ಗಾಗಿ ರಚಿಸಿಕೊಳ್ಳಿ.

**I see my lover at first time in college campus**

ಈ ವಾಕ್ಯದ ಮೊದಲ ಅಕ್ಷರಗಳು ನಿಮ್ಮ ಪಾಸ್‌ವರ್ಡ್ ಆಗಬಹುದು. ಅಂದರೆ– **Ismlafticc** ನೀವು ಈ ಪಾಸ್‌ವರ್ಡ್‌ನ್ನು ಫೇಸ್‌ಬುಕ್‌ಗೆ ಬಳಸಬೇಕು ಎಂದಾದರೆ ನಾಲ್ಕನೇ ಅಕ್ಷರದ ನಂತರ ಸಿ ಸೇರಿಸಿಕೊಳ್ಳಿ.

**Ismlfafticc** ಸಂಖ್ಯೆ ಮತ್ತು ಚಿಹ್ನೆ ಸೇರಿಸಬೇಕಾದರೆ ಎರಡನೇ ಅಕ್ಷರದ ನಂತರ ಚಿಹ್ನೆ ಮತ್ತು ಕೊನೆಯ ಅಕ್ಷರದ ಹಿಂದೆ ಸಂಖ್ಯೆ ಬರುವಂತೆ ಮಾಡಿಕೊಳ್ಳಬಹುದು. ಅಂದರೆ **I*smlaftic2c** ಸಂಬಂಧಿಸಿದ ಸೈಟ್‌ಗಳಲ್ಲೂ ನಿಮ್ಮ ಪಾಸ್‌ವರ್ಡ್‌ಗಳ ಬಲಿಷ್ಠತೆಯನ್ನು ಕೆಂಪು ಮತ್ತು ಹಸಿರು ಬಣ್ಣದಲ್ಲಿ ತೋರಿಸುವ ಪ್ರಯತ್ನವಿರುತ್ತದೆ. ಅದರ ಸಹಾಯ ಪಡೆಯಿರಿ.

ನಿಮ್ಮ ಪಾಸ್‌ವರ್ಡ್ ಎಷ್ಟು ಸೇಫ್ ಮತ್ತು ಬಲಿಷ್ಠ ಎಂಬುದನ್ನು **www.passwordmeter.com** ವೆಬ್ ಸೈಟ್ ನಲ್ಲಿ ಪರೀಕ್ಷಿಸಿಕೊಳ್ಳಬಹುದು.

**ನೆನಪಿಟ್ಟುಕೊಳ್ಳುವುದು ಹೇಗೆ?**

ವೈಯಕ್ತಿಕವಾಗಿ ನಿಮ್ಮ ಹಂತದಲ್ಲಿ ಬರೆದಿಟ್ಟುಕೊಳ್ಳಿ. ಇಲ್ಲದಿದ್ದರೆ ನೀವು ಡಾಶ್‌ಲೇನ್ (**DASHLANE**) ನ ಸಹಾಯ ಪಡೆಯಬಹುದು. ಕಂಪ್ಯೂಟರ್ ಮತ್ತು ಸ್ಮಾರ್ಟ್ ಫೋನ್ ಗಳಲ್ಲಿ ಈ ಆ್ಯಪ್ ಲಭ್ಯವಿದೆ. ನಿಮ್ಮ ಪಾಸ್‌ವರ್ಡ್‌ಗಳನ್ನು ರಕ್ಷಿಸಿಕೊಂಡು ಸಂಬಂಧಪಟ್ಟ ಸೈಟ್ ಗೆ ತಾನೇ ನಮೂದಿಸುತ್ತದೆ. ಅದು ಕೂಡ ನಿಮ್ಮ ಅನುಮತಿಯ ಮೇರೆಗೆ, ಇದು ಅತ್ಯಂತ ನಂಬುಗೆಯ ಆ್ಯಪ್ ಆಗಿದ್ದು ಇದರ ಸಹಾಯ ಪಡೆಯಬಹುದು.

ನೆನಪಿರಲಿ: ಎರಡು– ಮೂರು ತಿಂಗಳಿಗೊಮ್ಮೆ ಸದಾ ಪಾಸ್‌ವರ್ಡ್ ಬದಲಾಯಿಸುತ್ತಿರಬೇಕು. ಯಾರೊಂದಿಗೂ ಪಾಸ್‌ವರ್ಡ್ ಅನ್ನು ಹಂಚಿಕೊಳ್ಳುವ ಪ್ರಯತ್ನ ಬೇಡ. ಯಾರೋ ನಿಮ್ಮ ಪಾಸ್‌ವರ್ಡ್ ಕಬಳಿಸುವ ಸೂಕ್ಷ್ಮ ಸಿಕ್ಕಲ್ಲಿ ತಕ್ಷಣ ಬದಲಾಯಿಸಿಬಿಡಿ. ತಾತ್ಸಾರ ಮಾಡದೇ ನಿಮ್ಮ ವೈಯಕ್ತಿಕ ಮಾಹಿತಿಗಳನ್ನು ರಕ್ಷಿಸಿಕೊಳ್ಳಿ.